**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# Crl.Mis.No.176/2023

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಾವ್ಯ.ಹೆಚ್ | PW-1 |
| ತಂದೆಯ /ಗಂಡನ ಹೆಸರು | : | ಮರುದಾಸ್ | |
| ವಯಸ್ಸು | : | 25 ವರ್ಷ | - |
| ಉದ್ಯೋಗ | : | ಗೃಹಿಣಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **29.04.2024.** |
| ವಾಸಸ್ಥಳ | : | ಉಯ್ಯಂಬಳ್ಳಿ ಗ್ರಾಮ | - |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಸಿ.ಪಿ ವಕೀಲರಿಂದಃ**

ನನ್ನ ಮತ್ತು ಎದುರುದಾರರ ವಿವಾಹ ದಿಃ 30.05.2019 ರಂದು ಸರಗೂರಿನ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಗುರು ಹಿರಿಯರ ನಿಶ್ಚಯದಂತೆ ಹಿಂದೂ ಸಂಪ್ರದಾಯದಂತೆ ವಿವಾಹ ಆಗಿರುತ್ತದೆ. ಮದುವೆಯ ಸಮಯದಲ್ಲಿ ಎದುರುದಾರರಿಗೆ 5 ಗ್ರಾಂ ಚಿನ್ನದ ಉಂಗುರ, 20 ಗ್ರಾಂ ಚಿನ್ನದ ಕೊರಳಿನ ಚೈನ್ ಮತ್ತು ನಗದು ಒಂದು ಲಕ್ಷ ಹಣವನ್ನು ಎದುರುದಾರರಿಗೆ ನನ್ನ ತವರುಮನೆಯಿಂದ ಉಡುಗೊರೆಯಾಗಿ ಕೊಟ್ಟಿರುತ್ತಾರೆ.

ನನ್ನ ಮತ್ತು ಎದುರುದಾರರ ನಡುವೆ ಎರಡು ವರ್ಷಗಳ ದಾಂಪತ್ಯದ ಜೀವನದ ಫಲವಾಗಿ 2 ನೇ ಅರ್ಜಿದಾರರಾದ ಹೆಣ್ಣು ಮಗು ಜನಿಸಿದ್ದು ಅವರಿಗೆ ಸಾಹಿತಿ ಜಾಸ್ಮಿನ್ ಎಂಬ ಹೆಸರು ನಾಮಕರಣ ಮಾಡಲಾಗಿರುತ್ತದೆ. 2 ನೇ ಅರ್ಜಿದಾರರಿಗೆ ಈಗ 4 ವರ್ಷ ವಯಸ್ಸಾಗಿರುತ್ತದೆ.

ನಾನು 2 ನೇ ಅರ್ಜಿದಾರರ ಗರ್ಭಿಣಿ ಇದ್ದಾಗ ಎದುರುದಾರರು ಅವರ ಮನೆಯಲ್ಲಿ ನನಗೆ ಕೆಲಸಕ್ಕೆ ಹೋಗವಂತೆ ಹಿಂಸೆ ಕೊಟ್ಟಿರುತ್ತಾರೆ. ಪ್ರಸೂತಿ ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗುವಾಗ ತಾಯಿ ಕಾರ್ಡನ್ನು ಸಹ ನನಗೆ ಎದುರುದಾರರು ಕೊಟ್ಟಿರುವುದಿಲ್ಲ. ನನಗೆ ಹೆಣ್ಣು ಮಗು ಜನಿಸಿರುತ್ತದೆ ಎಂಬ ಕಾರಣಕ್ಕೆ ಮಗುವಿನ ಜನನ ಪ್ರಮಾಣ ಪತ್ರ ಪಡೆಯಲು ಅವರಿಗೆ ಸೇರಿದ ಆಧಾರ್ ಕಾರ್ಡನ್ನು ಸಹ ನೀಡಿರುವುದಿಲ್ಲ. 2 ನೇ ಅರ್ಜಿದಾರರಿಗೆ ಒಂದು ವರ್ಷ ವಯಸ್ಸಿದ್ದಾಗ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಮನೆಯಿಂದ ಹೊರಗಡೆ ಹಾಕಿರುತ್ತಾರೆ.

ನಿಮ್ಮ ಮನೆಯಲ್ಲಿ ವರದಕ್ಷಿಣೆ ಕೊಟ್ಟಿರುವುದು ಸಾಕಾಗುವುದಿಲ್ಲ, ಇನ್ನೂ ವರದಕ್ಷಿಣೆ ತರುವಂತೆ ನನಗೆ ತೊಂದರೆ ಕೊಡುತ್ತಾ ಬಂದಿರುತ್ತಾರೆ. ಎದುರುದಾರರು ತಮ್ಮ ವಕೀಲರ ಮೂಲಕ ನಾನು ಎದುರುದಾರರ ಬಳಿ ಬಂದು ಜೀವನ ಮಾಡುವಂತೆ ನೋಟೀಸನ್ನು ಕೊಡಿಸಿದ್ದು ಅದಕ್ಕೆ ನಾನು ಎದುರುದಾರರ ಮನೆಗೆ ಹೋಗಿ ಒಂದು ದಿನ ಇದ್ದು, ನಂತರ ನಾನು ನಮ್ಮ ಮನೆಗೆ ವಾಪಸ್ಸು ಬಂದಿರುತ್ತೇನೆ. ನಂತರ ನಾನು ವಕೀಲರ ಮೂಲಕ ಜೀವನಾಂಶ ಕೋರಿ ಸದರಿ ಅರ್ಜಿಯನ್ನು ನೀಡಿರುತ್ತೇನೆ.

ಎದುರುದಾರರು ಮೇಟಿಕುಪ್ಪೆ ವಲಯ ಅರಣ್ಯ ಕಛೇರಿಯಲ್ಲಿ ಹಂಗಾಮಿ ದಿನಕೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದು, ಅವರಿಗೆ ಮಾಸಿಕ ಇಪ್ಪತ್ತು ಸಾವಿರ ಬರುತ್ತದೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಎದುರುದಾರರಿಗೆ ಮೂರರಿಂದ ನಾಲ್ಕು ಎಕರೆ ಪಿತ್ರಾರ್ಜಿತ ಆಸ್ತಿ ಇದ್ದು, ಸದರಿ ಜಮೀನಿನಲ್ಲಿ ಹತ್ತಿ , ರಾಗಿ ಇನ್ನಿತರ ಬೆಳೆಗಳನ್ನು ಬೆಳೆದು ಸಾಕಷ್ಟು ಹಣ ಪಡೆಯುತ್ತಿರುತ್ತಾರೆ. ಎದುರುದಾರರು ನನ್ನನ್ನು ಮತ್ತು 2 ನೇ

ಅರ್ಜಿದಾರರನ್ನು ನಿರ್ಲಕ್ಷ ಮಾಡಿದ್ದು, ನನ್ನ ಹಾಗೂ 2 ನೇ ಅರ್ಜಿದಾರರ ಜೀವನಕ್ಕಾಗಿ ಮಾಸಿಕ ತಲಾ ಹತ್ತು ಸಾವಿರ (ರೂ.10,000/-) ಜೀವನಾಂಶ ಕೊಡಿಸಬೇಕಾಗಿ ನ್ಯಾಯಾಲಯದಲ್ಲಿ ಬೇಡಿಕೊಳುತ್ತಿದ್ದೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**